ಅನುದಾನವನ್ನು ಬಿಡುಗಡೆ ಮಾಡುವಂತೆ ಪತ್ರ ವ್ಯವಹಾರ, ದೂರವಾಣಿ ಮತ್ತು ಕಛೇರಿಗೆ ಭೇಟಿ ನೀಡುವುದರ ಮೂಲಕ ಒತ್ತಾಯ ತರಲಾಗುತ್ತಿದೆ, ದಿನಾಂಕ : 24–12–2004 ರಂದು ಸುತ್ತೋಲೆಯನ್ನು ಹೊರಡಿಸಿ ಪ್ರತಿ ಗ್ರಾಮ ಪಂಚಾಯಿತಿಯು ತನ್ನ ಆಯವ್ಯಯದಲ್ಲಿ ರೂ.25.000/– ಗಳನ್ನು ತಾತ್ಕಾಲಿಕವಾಗಿ ಪ್ರೇರಕರ ಗೌರವಧನ ಪಾವತಿಸಲು ಸೇರಿ ಸಾಕ್ಷರತಾ ಕಾರ್ಯಕ್ರಮಕ್ಕೆ ತೆಗೆದಿಡಲು ಸೂಚಿಸಲಾಗಿದೆ.

ಊ) ಈ ಕೇಂದ್ರಗಳ ಕಾರ್ಯ ನಿರ್ವಹಿಸಲು ಸ್ವಂತ ಕಟ್ಟಡಗಳ ಸೌಲಭ್ಯವಿರುವುದಿಲ್ಲ.

ಋ) ಈ ಕೇಂದ್ರಗಳ ಕಾರ್ಯ ನಿರ್ವಹಿಸಲು ಶಾಲೆ, ಅಂಗನವಾಡಿ, ಸಮುದಾಯ ಭವನ ಮತ್ತು ಖಾಸಗಿ ಕೊಠಡಿಗಳ ಸೌಲಭ್ಯವನ್ನು ಒದಗಿಸಲಾಗಿದೆ, ಅಲ್ಮೇರಾ, ಮೇಜು ಕುರ್ಚಿ, ಕಲಿಕಾ ಬೋಧನಾ ಸಾಮಗ್ರಿ, ಕ್ರೀಡೆ ಮತ್ತು ಮನೋರಂಜನಾ ಸಾಮಗ್ರಿಗಳ ಸೌಲಭ್ಯಗಳನ್ನು ಕೇಂದ್ರದ ಹಲವು ಚಟುವಟಿಕೆಗಳನ್ನು ನಡೆಸಲು ಒದಗಿಸಲಾಗಿದೆ.

2021 (2192) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಇರುವ ವಿವಿಧ ಇಂಜಿನಿಯರ್ ಹುದ್ದೆಗಳು ಯಾವುವು ಹಾಗೂ ಈ ಹುದ್ದೆಗಳಲ್ಲಿ ಯಾರು ಯಾರು ಎಷ್ಟೆಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದರೆ (ವಿವರಗಳನ್ನು ನೀಡುವುದು);

ಆ) ಇವರುಗಳ ಪೈಕಿ, ಎಷ್ಟು ಜನರು ಮಂಡಳಿಯ ಸೇವೆಗೆ ಸೇರಿದವರಾಗಿದ್ದಾರೆ ಹಾಗೂ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಅಧಿಕಾರಿ ನೌಕರರು ನಿಯೋಜನೆ/ಎರವಲು ಸೇವೆಯ ಮೇಲಿದ್ದಾರೆ.

ಇ) ಇವರೆಲ್ಲರ ಪೈಕಿ, ಯಾವ ಯಾವ ಅಧಿಕಾರಿ/ನೌಕರರುಗಳ ಮೇಲೆ ಯಾವ ಯಾವ ಭ್ರಷ್ಟಾಚಾರದ ಪ್ರಕರಣಗಳು ಮತ್ತು ವಿಚಾರಣೆಗಳು ಬಾಕಿ ಇವೆ (ಪ್ರಕರಣಗಳವಾರು ಪೂರ್ಣ ವಿವರಗಳನ್ನು ಒದಗಿಸುವುದು);

ಈ) ಇಂತಹವರುಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ಅವರವರ ಮಾತೃ ಇಲಾಖೆಗೆ ವಾಪಸ್ಸು ಕಳುಹಿಸುವ ಬಗ್ಗೆ ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ಮಾನ್ಯ ವಸತಿ ಸಚಿವರು) :

ಅ) ಸರ್ಕಾರದಿಂದ ಈ ಮಂಡಳಿಗೆ ಕೆಳಕಂಡ ಇಂಜಿನಿಯರ್ ಹುದ್ದೆಗಳು ಮಂಜೂರಾಗಿರುತ್ತದೆ.

ಕ್ರ.ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆ
1	ಅಧೀಕ್ಷಕ ಅಭಿಯಂತರರು (ತಾಂತ್ರಿಕ ನಿರ್ದೇಶಕರು)	1
2	ಕಾರ್ಯಪಾಲಕ ಅಭಿಯಂತರರು (ಪ್ರಾಯೋಜನ ವ್ಯವಸ್ಥಾಪಕರು (ತಾಂ.)	5
3	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು	16
4	ಸಹಾಯಕ ಅಭಿಯಂತರರು	29
5	ಕಿರಿಯ ಅಭಿಯಂತರರು	13

ವಿವರಗಳನ್ನು ಅನುಬಂಧ–ಅ ನಲ್ಲಿ ನೀಡಲಾಗಿದೆ. (ಅನುಬಂಧ 'ಅ', 'ಆ' ಗಳನ್ನು ಮಾನ್ಯ ಸದಸ್ಯರಿಗೆ ಮಾತ್ರ ಒದಗಿಸಲಾಗಿದೆ).

ಆ) ಈ ಪೈಕಿ ಮಂಡಳಿಯ ಸೇವೆಗೆ ಸೇರಿದ 23 ಇಂಜಿನಿಯರ್‌ರವರು ಮತ್ತು ಅನ್ಯ ಸೇವೆಗೆ ಸೇರಿದ 39 ಇಂಜಿನಿಯರ್‌ಗಳಿದ್ದು, ವಿವರ ಕೆಳಕಂಡಂತಿದೆ.

ಕ್ರ.ಸಂ.	ಹುದ್ದೆ	ಮಂಡಳಿ	ಅನ್ಯಸೇವೆ
1	ಅಧೀಕ್ಷಕ ಅಭಿಯಂತರರು (ತಾಂತ್ರಿಕ ನಿರ್ದೇಶಕರು)	–	1
2	ಕಾರ್ಯಪಾಲಕ ಅಭಿಯಂತರರು (ಪ್ರಾಯೋಜನ ವ್ಯವಸ್ಥಾಪಕರು (ತಾಂ.)	–	5
3	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು	14	2
4	ಸಹಾಯಕ ಅಭಿಯಂತರರು	8	20
5	ಕಿರಿಯ ಅಭಿಯಂತರರು	2	11

ವಿವರಗಳನ್ನು ಅನುಬಂಧ–ಅ ನಲ್ಲಿ ನೀಡಲಾಗಿದೆ.

ಇ) ಮಂಡಳಿಯ 15 ಮತ್ತು ಅನ್ಯ ಸೇವಾ ಅವಧಿಯ 15 ಅಧಿಕಾರಿಗಳ ಮೇಲೆ ಕರ್ತವ್ಯಲೋಪ, ಆರ್ಥಿಕ ನಷ್ಟದ ಆಪಾದನೆ ಇರುತ್ತದೆ. ಈ ಪ್ರಕರಣಗಳ ಬಗ್ಗೆ ವಿಚಾರಣಾಧಿಕಾರಿಗಳನ್ನು ನೇಮಿಸಿದ್ದು, ವಿಚಾರಣೆಗಳು ಪ್ರಗತಿಯಲ್ಲಿರುತ್ತದೆ. ವಿವರಗಳನ್ನು ಅನುಬಂಧ–ಆ ನಲ್ಲಿ ನೀಡಲಾಗಿದೆ.

ಈ) ಅನ್ಯ ಸೇವಾ ಅವಧಿಯ ಮೇಲೆ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ, ಪ್ರಕರಣಗಳಲ್ಲಿ ಭಾಗಿಯಾಗಿರುವ 15 ಅಧಿಕಾರಿಗಳ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಿದ್ಧಪಡಿಸಿ ನಿಯಮಾನುಸಾರ ನೋಟೀಸ್‌ಗಳನ್ನು ಜಾರಿಗೊಳಿಸಲಾಗಿದೆ. ಇವರುಗಳ ಪೈಕಿ ಓರ್ವ ಅಧಿಕಾರಿಯವರು ವಯೋನಿವೃತ್ತಿ ಹೊಂದಿರುತ್ತಾರೆ ಮತ್ತು 8 ಇಂಜಿನಿಯರ್‌ಗಳ ಸೇವೆಯನ್ನು ಅವರ ಮಾತೃ ಇಲಾಖೆ ಈಗಾಗಲೇ ಹಿಂದಿರುಗಿಸಲಾಗಿದೆ. ಉಳಿದ 7 ಇಂಜಿನಿಯರ್‌ಗಳ ವಿರುದ್ಧ ವಿಚಾರಣೆ ಪ್ರಗತಿಯಲ್ಲಿದ್ದು, ತಪ್ಪಿತಸ್ಥರೆಂದು ಸಾಬೀತಾದಲ್ಲಿ ಅವರನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು.

2022(2275) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂಸೇನಾ ನಿಗಮವು ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಯಾವಾಗ ವಹಿಸಿಕೊಂಡಿದೆ (ಕಾಮಗಾರಿಗಳ ಪೂರ್ಣ ವಿವರಗಳನ್ನು ಮತ್ತು ಅಂದಾಜು ವೆಚ್ಚವನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಆ) ಈ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; ಎಷ್ಟು ಅಪೂರ್ಣಗೊಂಡಿವೆ;

ಇ) ಜಿಲ್ಲೆಯಲ್ಲಿ ನಿಗಮವು ವಹಿಸಿಕೊಂಡಿರುವ ಕಾಮಗಾರಿಗಳು ಅಪೂರ್ಣವಾಗಿರುವುದು ಹಾಗೂ ನಿರ್ವಹಿಸಿರುವ ಕಾಮಗಾರಿಗಳು ಸಹ ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ಹಾಗೂ ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 259 ಕಾಮಗಾರಿಗಳು ಪೂರ್ಣಗೊಂಡಿವೆ, 61 ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಕಾಮಗಾರಿಗಳು ಅಪೂರ್ಣಗೊಂಡಿರುವ ವಿಚಾರ ಮಾತ್ರ ಗಮನಕ್ಕೆ ಬಂದಿರುತ್ತದೆ.

ಈ) ಕಾಮಗಾರಿಗಳನ್ನು ವಹಿಸಿದ ಇಲಾಖೆಗಳಿಂದ ನಿವೇಶನ ಹಸ್ತಾಂತರಿಸುವಲ್ಲಿ, ಬಿಟುಮೆನ್ ದರ ಹೆಚ್ಚಳದಿಂದ ಪರಿಷ್ಕೃತ ಅಂದಾಜು ಪಟ್ಟಿ ಅನುಮೋದನೆ ನೀಡುವಲ್ಲಿ ಹಾಗೂ ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬ ಉಂಟಾಗುತ್ತಿರುವುದು ಇದಕ್ಕೆ ಕಾರಣವಾಗಿರುತ್ತದೆ. ಈ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿದೆಯೆಂದು ಯಾವುದೇ ಪ್ರಕರಣ ವರದಿಯಾಗಿಲ್ಲವಾಗಿ, ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.